**ಪಾಠ–9** **ಮೇ 26–ಜೂನ್ 2**

# ಸೃಷ್ಟಿಕರ್ತನನ್ನು ಆರಾಧಿಸಿರಿ

**ಸಬ್ಬತ್ತಿನ ಮಧ್ಯಾನ್ಹ**

**ಈ ವಾರದ ಅಧ್ಯಯನಕ್ಕಾಗಿ :** ಪ್ರಕಟಣೆ 2:13, 24; 2 ಕೊರಿಂಥ 11:13–15; ಕೀರ್ತನೆಗಳು 146:4; ಆದಿಕಾಂಡ 1–2:3; ಪ್ರಕಟಣೆ 13:1–17

*ಸ್ಮರಣ ವಾಕ್ಯ :* **ಭೂಲೋಕದವರನ್ನೆಲ್ಲಾ ಮರುಳು ಗೊಳಿಸುವ ಆ ಮಹಾ ಘಟ ಸರ್ಪನು ಅಂದರೆ ಪಿಶಾಚನೆಂತಲೂ ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪವು ದೊಬ್ಬಲ್ಪಟ್ಟು ಭೂಮಿಗೆ ಬಿದ್ದನು. ಅವನ ದೂತರೂ ಅವನೊಂದಿಗೆ ದೊಬ್ಬಲ್ಪಟ್ಟರು. (ಪ್ರಕಟಣೆ 12:9)**

**"ಪರಲೋಕದಿಂದ ಸೈತಾನನು ದೊಬ್ಬಲ್ಪಡುವ ಮುನ್ನ ದೂತರನ್ನು ವಂಚಿಸುತ್ತಿದ್ದನು. ದೇವರ ಪ್ರಸನ್ನತೆಯಲ್ಲಿ ತನ್ನ ಸ್ಥಳವನ್ನು ಬಿಟ್ಟು ಲೂಸಿಫರನು ಅತೃಪ್ತಿಗೊಂಡಿದ್ದ ಅನೇಕ ದೂತರಗಳನ್ನು ಸಂಧಿಸುತ್ತಿದ್ದನು. ಅವರಲ್ಲಿ ಬಹಳ ರಹಸ್ಯವಾಗಿ ಕೆಲಸ ಮಾಡುತ್ತಿದ್ದನು, ಮತ್ತು ದೇವರಿಗೆ ಭಯಪಡುವ ವಿಧಾನದಲ್ಲಿಯೇ ಈ ಎಲ್ಲಾ ವಿಧವಾದ ಕೆಲಸಗಳನ್ನು ಮಾಡುತ್ತಿದ್ದನು. ಪರಲೋಕದ ಜನರ ಮಧ್ಯದಲ್ಲಿ ಇದ್ದ ದೇವರ ಅಜ್ಞೆಗಳ ಕುರಿತಾಗಿ ಭಿನ್ನಾಭಿಪ್ರಾಯಗಳನ್ನು ಬಿತ್ತುತ್ತಿದ್ದನು, ಆ ಆಜ್ಞೆಗ್ಗಳು ಅವರ ಮೇಲೆ ಅನವಶ್ಯಕವಾಗಿ ಹೇರಲಾಗಿದೆ ಎಂದು ವಾದಿಸುತ್ತಿದ್ದನು. ಎಲೆನ್ ಜಿ ವೈಟ್ ಮಹಾ ಹೋರಾಟ ಪುಟ 495**.

ಎದೆನ್ ತೋಟದಲ್ಲಿ ಸರ್ಪದ ರೂಪದಲ್ಲಿ ಮಾರುವೇಷ ಧರಿಸಿ ಹವ್ವಳನ್ನು ವಂಚಿಸಿದನು. ಚರಿತ್ರೆಯ ಉದ್ದಕ್ಕೂ ಮತ್ತು ಈ ದಿನದ ತನಕ ಮತ್ತು ಸಾವಿರ ವರ್ಷಗಳ ನಂತರವೂ ಕೂಡ ಅವನು ತನ್ನ ಕೆಲಸಗಳನ್ನು ನೆರವೇರಿಸಿಕೊಳ್ಳಲು ಇದೆ ವಂಚನೆಯನ್ನು ಉಪಯೋಗಿಸುತ್ತಾನೆ (ಪ್ರಕಟಣೆ 20:8).

ದುರಾದೃಷ್ಟವಾಗಿ, ಅವನು ಹೆಚ್ಚು ಜಾಣನಾಗಿದ್ದಾನೆ, ಶಕ್ತಿಶಾಲಿಯಾಗಿದ್ದಾನೆ, ಮತ್ತು ನಮ್ಮೆಲ್ಲರಿಗಿಂತ ಹೆಚ್ಚು ತಂತ್ರಗಾರನಾಗಿದ್ದಾನೆ. ಅವನ ಮೊಸಗಳಿಂದ

ತಪ್ಪಿಸಿಕೊಳ್ಳಲು ನಾವು ಕ್ರಿಸ್ತನ ಮತ್ತು ಆತನ ವಾಕ್ಯಗಳ ಮೇಲೆ ಹೆಚ್ಚು ಆಧಾರವಾಗಿರಬೇಕು. ನಿಮ್ಮ ದೇವರಾದ ಯೆಹೋವನನ್ನು ಹೊಂದಿಕೊಂಡವರಾದ ನೀವಾದರೋ ಇಂದಿನ ವರೆಗೂ ಉಳಿದುಕೊಂಡಿದ್ದೀರಿ. (ಧರ್ಮೋಪದೇಶಕಾಂಡ 4:4). ಇಲ್ಲಿ ಹೇಳಲಾಗಿರುವ ನಿಯಮವು ಇಂದಿಗೂ ಕೂಡ ಎಷ್ಟೋ ಪ್ರಸ್ತುತವಾಗಿದೆ.

ಈ ವಾರ ನಾವು ಸೈತಾನನ ಪರಿಣಾಮಕಾರಿಯಾದ ಕೆಲವು ವಂಚನೆಗಳನ್ನು ಕುರಿತಾಗಿ ಕಲಿಯೋಣ ಮತ್ತು ಅವುಗಳಿಂದ ನಾವು ಹೇಗೆ ನಮ್ಮನ್ನು ನಾವು ರಕ್ಷಿಸಿ ಕೊಳ್ಳುವುದು ಎಂಬುದರ ಕುರಿತಾಗಿ ತಿಳಿದುಕೊಳ್ಳೋಣ.

**ಈ ವಾರದ ಪಾಠವನ್ನು ಜೂನ್ 2 ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ.**

**ಭಾನುವಾರ**

## ಮಹಾ ಅದ್ಭುತವಾದ ವಂಚನೆ

ಈ ವಾರದ ಪಾಠದಲ್ಲಿ ನಾವು ಕಲಿಯುವ ಮೊದಲ ಪಾಠ ಮಹಾ ಹೋರಾಟ ಈ ಹೋರಾಟವು ದುರದೃಷ್ಟವಶಾತ್ ನಮ್ಮ ಈ ಭೂಮಿಯನ್ನು ದಾಟಿ ಬೇರೆ ಲೋಕಗಳಿಗೂ ಕೂಡ ವಿಸ್ತರಿಸಿದೆ.

ಇಲ್ಲಿಯ ಸಮಸ್ಯೆಯೆಂದರೆ ಅನೇಕ ಜನರು ಇದರಲ್ಲಿ ಕ್ರೈಸ್ತರೂ ಕೂಡ ಸೇರಿಕೊಂಡು ನಂಬುವುದು ಏನೆಂದರೆ ಅವರು ಸೈತಾನನಲ್ಲಿ ನಂಬಿಕೆ ಇಡದೆ ಇರುವುದರಿಂದ ಈ ಮಹಾಹೋರಾಟ ನಡೆಯುತ್ತಿದೆ ಎಂದು ನಂಬುತ್ತಾರೆ. ಅವರಿಗೆ ಸೈತಾನನೆಂದರೆ ಈ ಲೋಕದಲ್ಲಿ ನಡೆಯುತ್ತಿರುವ ಕಷ್ಟ ಮತ್ತು ದುಃಖಗಳಿಗೆ ಅವನೇ ಕಾರಣ ಎಂದು ಅವರು ವಿವರಿಸುವ ಒಂದು ವಿಷಯವಾಗಿದೆ. ಅನೇಕರಿಗೆ ಈ ವಿಷಯ ಬಹಳ ನಿಜವಾಗಿ ಕಾಣುತ್ತದೆ, ಮತ್ತು ಮೇಲಣ ಲೋಕದಲ್ಲಿ ನಡೆಯುತ್ತಿರುವ ವಿಜ್ಞಾನದ ನಕ್ಷತ್ರಗಳ ಯುದ್ಧವಾಗಿ ಅದು ಕಾಣುತ್ತದೆ.

**ಈ ಕೆಳಗಿನ ವಚನಗಳನ್ನು ಓದಿರಿ, ಈ ಎಲ್ಲಾ ವಚನಗಳು ಕೂಡ ಪ್ರಕಟಣೆಯಿಂದ ಆರಿಸಲ್ಪಟ್ಟಿವೆ. ಅವು ಸೈತಾನನ ನಿಜ ಸ್ವರೂಪವನ್ನು ಹೇಗೆ ತಿಳಿಸುತ್ತವೆ ಮತ್ತು**

**ಕೊನೆಯ ದಿನಗಳಲ್ಲಿ ಅವನ ಪಾತ್ರದ ಕುರಿತಾಗಿ ಏನು ಹೇಳುತ್ತವೆ?** ಪ್ರಕಟಣೆ 2:13,24; 12:3, 7–9, 12, 17, 20:2, 7, 10.

ಕೊನೆಯ ದಿನಗಳಲ್ಲಿ ಸೈತಾನನು ಲೋಕದ ಜನರ ಮೇಲೆ ಎಷ್ಟು ಶಕ್ತಿಯನ್ನು ಹೊಂದಿದ್ದಾನೆ ಎಂದು ಪ್ರಕಟಣೆಯ ಪುಸ್ತಕ ನಮಗೆ ತೋರಿಸುತ್ತದೆ. ಸೈತಾನನು ಜನರನ್ನು ರಕ್ಷಣೆಯಿಂದ ದೂರ ತೆಗೆದುಕೊಂಡು ಹೋಗುವುದು ಮಾತ್ರವಲ್ಲದೆ ಯಾರು ಕ್ರಿಸ್ತನಲ್ಲಿ ನಂಬಿಕೆಯಾಗಿ ಇದ್ದಾರೋ ಅವರನ್ನು ಹಿಂಸಿಸುವುದಕ್ಕೆ ಅವರನ್ನು ಉಪಯೋಗಿಸುತ್ತಾನೆ.

ಸೈತಾನನ ಎಲ್ಲಾ ಯೋಚನೆಗಳನ್ನು (2 ಕೊರಿಂಥ 2:11) ಮನಸ್ಸು ಎಂಬ ಗ್ರೀಕ್ (ನೋಮೆಟ) ಪದದ ಅರ್ಥವನ್ನು ನಾವು ಗಮನಿಸಿದರೆ ಯಾವುದು ಇಲ್ಲವೋ ಅದನ್ನು ಇದೆ ಎಂದು ನಂಬುವುದಾಗಿದೆ. ಯಾರು ನಿಜವಾಗಿ ಇಲ್ಲವೆಂದು ನೀವು ನಂಬುವುದಿಲ್ಲವೋ ಅವರಿಂದ ಹೇಗೆ ನೀವು ಆಶ್ರಯವನ್ನು ಪಡೆಯುವಿರಿ? ಅನೇಕರು ಕ್ರೈಸ್ತರೆಂದು ಹೇಳಿಕೊಳ್ಳುವವರೂ ಕೂಡ ಸೈತಾನನ ನಿಜ ಸ್ವರೂಪವನ್ನು ಗಂಭಿರವಾಗಿ ಪರಿಗಣಿಸುವುದಿಲ್ಲ. ಅವನು ಕೊನೆಯ ಕಾಲದಲ್ಲಿ ಜನರನ್ನು ಹೇಗೆ ಮರುಳುಗೊಳಿಸುತ್ತಾನೆ ಎಂಬ ಅನೇಕ ವಚನಗಳನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತಾರೆ ಮತ್ತು ಆ ವಚನಗಳನ್ನು ನಿರ್ಲಕ್ಷಿಸುತ್ತಾರೆ. ಇನ್ನೂ ಕೆಲವರು ಸೈತಾನನು ನಿಜವಾದ ವ್ಯಕ್ತಿ ಎಂಬುದನ್ನೂ ಕೂಡ ಅಲ್ಲಗೆಳೆಯುತ್ತಾರೆ, ಸತ್ಯವೇದದ ಅನೇಕ ವಚನಗಳು ಇದರ ಕುರಿತಾಗಿ ಸಾಕ್ಷಿಯನ್ನು ಹೇಳಿದರೂ ಕೂಡ ಅವರು ಅದನ್ನು ನಂಬುವುದಿಲ್ಲ ಇದು ನಮಗೆ ಕೊನೆಯ ಕಾಲದಲ್ಲಿ ಸತ್ಯವೇದ ನಿಜವಾಗಿ ಏನು ಹೇಳುತ್ತದೆ ಎಂಬುದರ ಕುರಿತಾಗಿ ನಾವು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ ಎಂದು ತಿಳಿಸುತ್ತದೆ.

**ಸೈತಾನನ ಕೆಲಸಗಳ ಕುರಿತಾಗಿ ಪ್ರಕಟಣೆಯು ಇಷ್ಟು ಸ್ಪಷ್ಟವಾಗಿ ಅದರಲ್ಲೂ ಕೊನೆಯ ಕಾಲದ ಕುರಿತಾಗಿ ಹೇಳಿದರೂ ಕೂಡ ಪ್ರಕಟಣೆ 12:11 ರಲ್ಲಿ ನಾವು ಯಾವ ಮಹಾ ನಿರೀಕ್ಷೆಯನ್ನು ಕಾಣಬಹುದು? ಸೈತಾನನ ವಿರುದ್ದ ಹೋರಾಡಲು ನಮಗಿರುವ ಶಕ್ತಿಯ ಮೂಲ ಯಾವುದು?**

**ಸೋಮವಾರ**

## ಎರಡು ಮಹಾ ತಪ್ಪುಗಳು

ಈ ಕೆಳಗಿನ ವಚನಗಳನ್ನು ಓದಿರಿ. ವಂಚನೆಗೊಳಿಸುವ ಸೈತಾನನ ಶಕ್ತಿಯ ಕುರಿತಾಗಿ ಈ ವಚನಗಳು ಏನು ಹೇಳುತ್ತವೆ?

**2 ಕೊರಿಂಥ 11:13–15** ______________________________

**2 ಥೆಸಲೋನಿಕ 2:9,10** ______________________________

**ಪ್ರಕಟಣೆ 12:9** ______________________________

**ಪ್ರಕಟಣೆ 20:10** ______________________________

ಈ ಹಿಂದಿನ ಪಾಠದಲ್ಲಿ ನಾವು ಗಮನಿಸಿದ ಹಾಗೆ, ಯೇಸುವು ತನ್ನ ಹಿಂಬಾಲಕರಿಗೆ ಕೊನೆಯ ಕಾಲದ ವಂಚನೆಗಳ ಕುರಿತಾಗಿ ಎಚ್ಚರಿಸಿದ್ದನು. ಅವುಗಳಲ್ಲಿ ವಿಶೇಷವಾಗಿ ಆತನು ಸುಳ್ಳು ಕ್ರಿಸ್ತರು ಮತ್ತು ಸುಳ್ಳು ಪ್ರವಾದಿಗಳು ಬಂದು ಅನೇಕರನ್ನು ಮೋಸಗೊಳಿಸುವರು ಎಂದು ಎಚ್ಚರಿಸಿದ್ದನು. (ಮತ್ತಾಯ 24:5)

ಕೊನೆಯ ಕಾಲದಲ್ಲಿ ಸುಳ್ಳು ಕ್ರಿಸ್ತರು ಮತ್ತು ಸುಳ್ಳು ಪ್ರವಾದಿಗಳ ಬಗ್ಗೆ ಮಾತ್ರ ನಾವು ಎಚ್ಚರ ವಹಿಸಬೇಕಾಗಿಲ್ಲ. ನಮ್ಮ ಶತ್ರುವಾದ ಸೈತಾನನು ಈ ಮಹಾ ಹೋರಾಟದಲ್ಲಿ ಅನೇಕ ವಿಧವಾದ ಕುತಂತ್ರಗಳನ್ನು ಹೆಣೆದು ಅನೇಕರನ್ನು ಮೋಸಗೊಳಿಸಲು ಕಾದಿದ್ದಾನೆ. ಕ್ರೈಸ್ತರಾಗಿ, ಈ ಕುತಂತ್ರಗಳ ಕುರಿತಾಗಿ ನಾವು ಎಚ್ಚರವಹಿಸಬೇಕು. ಇದನ್ನು ನಾವು ಮಾಡಬೇಕಾದರೆ ಸತ್ಯವೇದವನ್ನು ಚೆನ್ನಾಗಿ ತಿಳಿದುಕೊಂಡಿರಬೇಕು ಮತ್ತು ಅದರ ಬೋಧನೆಯುನ್ನು ಅರ್ಥ ಮಾಡಿಕೊಂಡಿರಬೇಕು.

ಎಲೆನ್ ಜಿ ವೈಟ್ ರವರು ಈ ಎರಡೂ ಮಹಾ ಮೋಸಗಳ ಕುರಿತಾಗಿ ಹೀಗೆ ಹೇಳುತ್ತಾರೆ. ಈ ಎರಡು ಮಹಾ ಮೋಸಗಳ ಮುಖಾಂತರ ಅಂದರೆ

ಆತ್ಮದ ಅಮರತ್ವ ಮತ್ತು ಭಾನುವಾರದ ಪವಿತ್ರತೆ ಇವುಗಳ ಮೂಲಕ ಸೈತಾನನು ಅನೇಕರನ್ನು ವಂಚನೆಗೆ ಒಳಪಡಿಸುತ್ತಾನೆ, ಮೊದಲನೇಯದು ಆತ್ಮದ ನಿರಂತರತೆಯ ಬಗ್ಗೆ ಅಡಿಪಾಯವನ್ನು ಹಾಕಿದರೆ ನಂತರದ್ದು ರೋಮ್ ಕುರಿತಾಗಿ ಅನುಕಂಪವನ್ನು ತೋರಿಸುವಂತೆ ಮಾಡುತ್ತದೆ.ಅಮೇರಿಕದಲ್ಲಿರುವ ಪ್ರೊಟೆಸ್ಟೆಂಟ್ ರು ಈ ಆತ್ಮದ ಕುರಿತಾದ ವಿಷಯದಲ್ಲಿ ತಮ್ಮ ಕಬಂಧ ಬಾಹುಗಳನ್ನು ಚಾಚುತ್ತಾರೆ. ಅವರು ರೋಮ್ ಸಾಮ್ರಾಜ್ಯದ ಜೊತೆಯಲ್ಲಿ ತಮ್ಮ ಕೈ ಜೋಡಿಸುತ್ತಾರೆ; ಮತ್ತು ಈ ಮೂರು ಐಕ್ಯತೆಯ ಪ್ರಭಾವದಲ್ಲಿ ಈ ದೇಶವು ರೋಮ್ ನ ಹೆಜ್ಜೆ ಜಾಡಿನಲ್ಲಿ ನಡೆದು ಆಲೋಚನೆಯ ಸ್ವಾತಂತ್ರ್ಯವನ್ನು ತುಳಿಯುತ್ತಾ ಹೋಗುತ್ತದೆ. **ಮಹಾ ಹೋರಾಟ ಪುಟ 588**.

ಈ ಎರಡೂ ವಂಚನೆಗಳು ಕ್ರೈಸ್ತ ಲೋಕವನ್ನು ಹೇಗೆ ಪ್ರಭಾವಗೊಳಿಸುತ್ತವೆ ಎಂದು ತಿಳಿದುಕೊಳ್ಳಲು ಎಲೆನ್ ಜಿ ವೈಟ್ ಮ್ಮರವರು ಬರೆದ ಈ ಮಾತುಗಳು ಅನೇಕ ವರ್ಷಗಳ ನಂತರವೂ ಕೂಡ ನಮಗೆ ಎಷ್ಟು ಪ್ರಸ್ತುತವಾಗಿವೆ?

ಸೈತಾನನ ವಂಚನೆಗಳನ್ನು ತಿಳಿದುಕೊಳ್ಳಲು ಸತ್ಯವೇದದ ಜ್ಞಾನ ಮತ್ತು ಅದನ್ನು ಅರ್ಥ ಮಾಡಿಕೊಂಡು ಅದಕ್ಕೆ ವಿಧೇಯರಾಗಿ ನಡೆಯುವುದು ಅದರಲ್ಲೂ ವಿಶೇಷವಾಗಿ ಕೊನೆಯ ಕಾಲದಲ್ಲಿ ಎಷ್ಟು ಪ್ರಾಮುಖ್ಯವಾಗುತ್ತದೆ?

**ಮಂಗಳವಾರ**

## ಆತ್ಮದ ಅಮರತ್ವ

**ಈ ಕೆಳಗಿನ ವಚನಗಳು ಸತ್ತವರ ಸ್ಥಿತಿಯ ಕುರಿತಾಗಿ ಏನು ಹೇಳುತ್ತವೆ?ಈ ಎರಡು ಮಹಾ ತಪ್ಪುಗಳ ವಿಚಾರವಾಗಿ ಈ ವಚನಗಳು ನಮಗೆ ಯಾವ ರೀತಿಯ ರಕ್ಷಣೆಯನ್ನು ನೀಡುತ್ತವೆ**? ಪ್ರಸಂಗಿ 9:5,6, 10: ಕೀರ್ತನೆ 115:17; ಕೀರ್ತನೆ 146:4, 1 ಕೊರಿಂಥ 15:16–18; ದಾನಿಯೇಲನು 12:2

---

---

ಇತ್ತೀಚಿನ ಶತಮಾನಗಳಲ್ಲಿ ಹೃದಯ ಬಡಿತ ನಿಂತುಹೋಗಿ ಮತ್ತು ಉಸಿರಾಟವನ್ನು ನಿಲ್ಲಿಸಿರುವ ಅನೇಕರನ್ನು ಮತ್ತೆ ಆತ್ಮಸಾಕ್ಷಿಗೆ ತರುವ ಕುರಿತಾಗಿ ಹೆಚ್ಚಿನ ಚರ್ಚೆ ನಡೆಯುತ್ತಿದೆ. ಅನೇಕ ಸಂದರ್ಭಗಳಲ್ಲಿ ಅವರು ಮತ್ತೆ ತಮ್ಮ ಆತ್ಮಸಾಕ್ಷಿಗೆ ಮರಳಿದಾಗ ಅವರು ಸತ್ತಾಗ ಅನುಭವಿಸಿದ ಅದ್ಭುತವಾದ ಅನುಭವಗಳ ಕುರಿತಾಗಿ ಹೇಳುವುದನ್ನು ಪ್ರತ್ಯೇಕವಾಗಿ ಉಲ್ಲೆಖಿಸಲಾಗುತ್ತದೆ. ಕೆಲವರು ತಾವು ಹೇಗೆ ಗಾಳಿಯಲ್ಲಿ ತೇಲಿದೆವು ಮತ್ತು ಮೇಲಿನಿಂದ ಹೇಗೆ ತಮ್ಮ ಸ್ವಂತ ದೇಹಗಳನ್ನು ನೋಡಿದರು ಎಂಬುದರ ಕುರಿತಾಗಿ ವಿವರಿಸುತ್ತಾರೆ. ಇನ್ನೂ ಕೆಲವರು ತಾವು ಗಾಳಿಯಲ್ಲಿ ತೇಲುತ್ತಾ ತಮ್ಮ ದೇಹಗಳನ್ನು ಬಿಟ್ಟು ಸತ್ಯ ಮತ್ತು ಕರುಣೆಯ ಕುರಿತಾಗಿ ತಿಳಿಸುವ ಮಹಾ ವ್ಯಕ್ತಿಯನ್ನು ಕಂಡ ಬಗ್ಗೆ ವಿವರಿಸುತ್ತಾರೆ. ಇನ್ನೂ ಕೆಲವರು ಸತ್ತು ಹೋದ ತಮ್ಮ ಬಂಧುಗಳ ಜೊತೆಯಲ್ಲಿ ಮಾತನಾಡಿದ್ದಾಗಿ ಹೇಳುತ್ತಾರೆ.

ಇದು ಎಷ್ಟು ಸಾಮಾನ್ಯವಾಗಿದೆ ಎಂದರೆ ಇದಕ್ಕೆ ವೈಜ್ಞಾನಿಕವಾದ ಹೆಸರನ್ನು ಕೂಡ ಅಂದರೆ ಸಾವಿನ ಸಮೀಪದ ಅನುಭವ ಎಂದು (ಏನ್ ಡಿ ಇ ಎಸ್)ಹೆಸರು ನೀಡಲಾಗಿದೆ. ಏನ್ ಡಿ ಇ ಎಸ್ ಕುರಿತಾಗಿ ವಿವಾದಗಳು ಇದ್ದರೂ ಕೂಡ ಅನೇಕ ಕ್ರೈಸ್ತರು ಇದನ್ನು ಆತ್ಮದ ಅಮರತ್ವದ ಕುರಿತಾದ ಸಾಕ್ಷಿಯಾಗಿ ಉಪಯೋಗಿಸಿ ಮರಣದಲ್ಲಿ ಆತ್ಮವು ಮತ್ತೊಂದು ಸಾಮ್ರಾಜ್ಯಕ್ಕೆ ಹೋಗಿ ಆತ್ಮಸಾಕ್ಷಿಯಲ್ಲಿ ಬದುಕುತ್ತದೆ ಎಂದು ವಾದಿಸುತ್ತಾರೆ.

ಆದರೆ ಏನ್ ಡಿ ಇ ಎಸ್ ಎಂಬುದು ಈ ಎರಡು ಮಹಾ ತಪ್ಪುಗಳಲ್ಲಿ ಒಂದಾಗಿದೆ. ಸತ್ತ ನಂತರ ಆತ್ಮವು ಮತ್ತೊಂದು ವಿಧದಲ್ಲಿ ಜಿವಿಸುತ್ತದೆ ಎಂದು ಯಾರಾದರೂ ನಂಬಿದರೆ ಅಂತಹ ವ್ಯಕ್ತಿಯು ಅಧ್ಯಾತ್ಮಿಕತೆಯ ಮೋಸದ ಬಲೆಗೆ ಬಿದ್ದಿದ್ದಾನೆ ಎಂದು ಮತ್ತು ಆತನು ಯೇಸುವಿನ ಅವಶ್ಯಕತೆ ಇಲ್ಲ ಎಂದು ಬಹಿರಂಗವಾಗಿ ಮತ್ತು ವ್ಯವಸ್ಥಿತವಾಗಿ ಪ್ರಚಾರ ಮಾಡುತ್ತಾನೆ ಎಂದು ನಾವು ಭಾವಿಸಬಹುದು. ಈ ಏನ್ ಡಿ ಇ ಎಸ್ ಕುರಿತಾಗಿ ಬೋಧಿಸುವ

ಅನೇಕರು ಸತ್ತುಹೋದ ತಮ್ಮ ಬಂಧುಗಳನ್ನು ಸಂಧಿಸಿದಾಗ ಅವರು ಪ್ರೀತಿ, ಕರುಣೆ, ಮತ್ತು ಒಳ್ಳೆಯತನದ ಕುರಿತಾಗಿ ಮಾತ್ರ ಹೇಳುತ್ತಾರೆ ಹೊರೆತುಸತ್ಯವೇದ ಹೇಳುವಕ್ರಿಸ್ತನಲ್ಲಿರುವ ರಕ್ಷಣೆ, ಪಾಪ, ಮತ್ತು ಬರಲಿರುವ ನ್ಯಾಯ ತೀರ್ಪಿನ ಕುರಿತಾಗಿ ಏನನ್ನೂ ಕೂಡ ಹೇಳುವುದಿಲ್ಲ. ಸತ್ತ ನಂತರ ಕ್ರೈಸ್ತಿಯ ಅನುಭವವನ್ನು ಹೊಂದುವ ಅಧ್ಯಾತ್ಮಿಕತೆಯ ಕುರಿತಾಗಿ ಹೇಳುವ ಇವರು ಕ್ರೈಸ್ತಿಯ ಸಿದ್ಧಾಂತದ ಮೂಲ ಬೋಧನೆಗಳನ್ನು ಮರೆಯುತ್ತಾರೆ ಮತ್ತು ಅವರು ಹೇಳುವ ಈ ಮಾತುಗಳು ಅಧುನಿಕ ಯುಗದ ತತ್ವದ ಹಾಗೆ ಕಾಣುತ್ತದೆ, ಮತ್ತು ಇದು ಅವರು ಸಾಯುವ ಮುನ್ನ ಯಾಕೆ ಕ್ರೈಸ್ತತ್ವದ ಕಡೆಗೆ ಹೆಚ್ಚಿನ ಗಮನವನ್ನು ನೀಡುವುದಿಲ್ಲ ಎಂಬುದರ ವಿವರಣೆಯನ್ನು ನೀಡುತ್ತದೆ.

**ನಮ್ಮ ಆಲೋಚನೆಗಳು ಬೇರೆಯದ್ದನ್ನು ನಂಬುವುದಕ್ಕೆ ಎಲ್ಲಾ ಪ್ರೇರಣೆ ನೀಡಿದರೂ ಕೂಡ ಕ್ರೈಸ್ತವರಾಗಿ ನಾವು ಯಾಕೆ ದೇವರ ವಾಕ್ಯದ ಮೇಲೆ ಹೆಚ್ಚು ಅಧಾರವಾಗಿರಬಾರದು?**

**ಬುಧವಾರ**

## ಸಬ್ಬತ್ ಮತ್ತು ವಿಕಸನ ಸಿದ್ಧಾಂತ

ಸೈತಾನನು ಲೋಕವನ್ನು ಆತ್ಮದ ಅಮರತ್ವದ ಕುರಿತಾಗಿ ಹೇಗೆ ಮೊಸಗೊಳಿಸುವುದರಲ್ಲಿ ಹೇಗೆ ಯಶಸ್ವಿಯಾಗಿದ್ದಾನೋ ಅದೇ ರೀತಿಯಲ್ಲಿ ಸಬ್ಬತ್ತಿನ ಬದಲಿಗೆ ಭಾನುವಾರದ ಆರಾಧನೆಯನ್ನು ತರುವುದರಲ್ಲಿ (6 ಮತ್ತು 8 ನೇಯ ಪಾಠವನ್ನು ನೋಡಿರಿ) ಕ್ರೈಸ್ತಿಯ ಚರಿತ್ರೆಯ ಉದ್ದಕ್ಕೂ ಕೂಡ ಇದನ್ನು ಅವನು ಯಶಸ್ವಿಯಾಗಿದ್ದಾನೆ.

ಇತ್ತೀಚಿನ ವರ್ಷಗಳಲ್ಲಿ ಸೈತಾನನು ಏಳನೇಯ ದಿನದ ಸಬ್ಬತ್ತನ್ನು ಭಂಗಗೊಳಿಸುವ ಮತ್ತೊಂದು ಸಿದ್ಧಾಂತವನ್ನು ತಂದಿದ್ದಾನೆ ಅದುವೇ ವಿಕಸನ ವಾದ.

**ಆದಿಕಾಂಡ 1–2:3 ನ್ನು ಓದಿರಿ. ದೇವರು ಈ ಲೋಕವನ್ನು ಹೇಗೆ ಸೃಷ್ಟಿ ಮಾಡಿದನು ಮತ್ತು ಅದನ್ನು ಸೃಷ್ಟಿಸಲು ಎಷ್ಟು ಸಮಯ ಹಿಡಿಯಿತು ಎಂದು ಈ ವಚನಗಳು ಹೇಳುತ್ತವೆ?**

---

ಈ ವಚನಗಳ ವಿಸ್ತಾರವಾದ ಓದುವಿಕೆಯು ಸತ್ಯವೇದ ಆಧಾರಿತ ಸೃಷ್ಟಿಯ ಕುರಿತಾಗಿ ಎರಡು ಪ್ರಮುಖ ವಿಚಾರಗಳನ್ನು ಸ್ಪಷ್ಟಪಡಿಸುತ್ತದೆ, ಮೊದಲನೇಯದು, ಪ್ರತಿಯೊಂದನ್ನು ದೇವರು ಯೋಜನೆ ಮಾಡಿದ್ದನು ಮತ್ತು ಲೆಕ್ಕ ಹಾಕಿದ್ದನು; ಯಾವುದು ಕೂಡ ಯಾದೃಚ್ಛಿಕವಲ್ಲ, ಅನಿಯಂತ್ರಿತವಲ್ಲ, ಅಥವಾ ಆಕಸ್ಮಿಕವಲ್ಲ. ಸತ್ಯವೇದವು ಸೃಷ್ಟಿಯ ವಿಧಾನದಲ್ಲಿ ಯಾವುದೇ ವಿಧವಾದ ಆಕಸ್ಮಿಕಕ್ಕೆ ಅವಕಾಶವನ್ನು ನೀಡುವುದಿಲ್ಲ.

ಎರಡನೇಯದಾಗಿ, ಈ ವಚನಗಳು ನಿಸ್ಸಂಶಯವಾಗಿ ಹೇಳುವುದೇನೆಂದರೆ ಪ್ರತಿಯೊಂದು ಜೀವಿಯು ಕೂಡ ಅದರ ರೀತಿಯಲ್ಲಿ ಉಂಟಾಯಿತು, ಅಂದರೆ ಪ್ರತಿಯೊಂದನ್ನು ಪ್ರತ್ಯೇಕವಾಗಿ ಮತ್ತು ವಿಶೇಷವಾಗಿ ಬೇರೆ ಪ್ರಾಣಿಗಳಿಗಿಂತ ಭಿನ್ನವಾಗಿ ಸೃಷ್ಟಿಸಲಾಯಿತು. ಸತ್ಯವೇದವು ಲೋಕದ ಮೇಲೆ ಉಂಟಾದ ಎಲ್ಲಾ ಜೀವಿಗಳ ವಿಚಾರದಲ್ಲಿ ಒಂದು ಜೀವಿಯಿಂದ ಮತ್ತೊಂದು ಜೀವಿಯ ಬೆಳವಣಿಗೆಯ ಕುರಿತಾಗಿ ಎಲ್ಲಿಯೂ ಕೂಡ ಉಲ್ಲೇಖಿಸುವುದಿಲ್ಲ.

ಸಾಹಿತ್ಯ ಆಧಾರವಿಲ್ಲದ ಅರ್ಥದಿಂದ ಆದಿಕಾಂಡವನ್ನು ನೋಡಿದರೂ ಕೂಡ ಈ ಎರಡೂ ವಿಚಾರಗಳು ಬಹಳ ಸ್ಪಷ್ಟವಾಗುತ್ತದೆ. ಸೃಷ್ಟಿಯಲ್ಲಿ ಯಾವುದು ಕೂಡ ಯಾದೃಚ್ಛಿಕವಲ್ಲ. ಮತ್ತು ಎಲ್ಲಾ ಜೀವಿಗಳಿಗೂ ಯಾವುದೇ ರೀತಿಯ ಸಾಮಾನ್ಯ ಅನುವಂಶಿಕತೆ ಇಲ್ಲ.

ಈಗ ಡಾರ್ವಿನ್ ನ ವಿಕಸನವಾದಕ್ಕೆ ಬರೋಣ; ಅದು ಅದರ ವಿವಿಧ ವಿವರಣೆಗಳಲ್ಲಿ ಎರಡೂ ವಿಚಾರಗಳನ್ನು ತಿಳಿಸುತ್ತದೆ: ಯಾದೃಚ್ಛಿಕತೆ ಮತ್ತು ಎಲ್ಲಾ ಜೀವಿಗಳಿಗೂ ಸಾಮಾನ್ಯ ಅನುವಂಶಿಕತೆ.

ಹಾಗಾದರೆ ಆದಿಕಾಂಡದ ಸೃಷ್ಟಿಯ ಕುರಿತಾದ ವಿವರಣೆಯನ್ನು ಯಾಕೆ ಅನೇಕರು ಅದರ ಮೂಲ ಸಿದ್ಧಾಂತವನ್ನು ಬಿಟ್ಟು ಬೇರೆ ವಿಧಾನದಲ್ಲಿ ವಿವರಿಸಲು ಪ್ರಯತ್ನ ಮಾಡುತ್ತಿದ್ದಾರೆ? ವಿಕಸನವಾದದ ಪ್ರಭಾವವು ಅನೇಕ ಧರ್ಮಗಳ ಜನರನ್ನು ಮಾತ್ರವಲ್ಲದೆ ಕ್ರೈಸ್ತರನ್ನು ಕೂಡ ತಮ್ಮ ಕ್ರೈಸ್ತಿಯ ನಂಬಿಕೆಗೆ ವಿರುದ್ಧವಾಗಿ ಹೋಗುವಂತೆ ಪ್ರೇರಣೆಯನ್ನು ನೀಡುತ್ತದೆ.

ಆದರೂ ಕೂಡ, ಕೊನೆಯ ಕಾಲದ ವಂಚನೆಗಳಲ್ಲಿ ವಿಕಸನವಾದವು ಒಂದಾಗಿ ಸೇರಿಕೊಂಡಾಗ ಅದು ಇನ್ನೂ ಶಕ್ತಿಶಾಲಿಯಾಗಿ ಕಾಣಿಸುತ್ತದೆ. ಹಾಗಾದರೆ ಒಂದು ದಿನವನ್ನು ಅಂದರೆ ಏಳನೇಯ ದಿನದ ಸಬ್ಬತ್ತನ್ನು ಆರು ದಿನಗಳ ಸೃಷ್ಟಿಗೆ ಸ್ಮಾರಕವಾಗಿ ತೆಗೆದುಕೊಳ್ಳದೆ ಬದಲಿಗೆ 3 ಶತಕೋಟಿ ವರ್ಷಗಳ (ಲೋಕದ ಮೇಲೆ ಜೀವನ ಪ್ರಾರಂಭವಾಗಿ ಅಷ್ಟು ವರ್ಷಗಳು ಕಳೆದಿವೆ) ಸೃಷ್ಟಿಗೆ ಸ್ಮಾರಕವಾಗಿ ಯಾಕೆ ತೆಗೆದುಕೊಳ್ಳಬೇಕು. ವಿಕಸನ ವಾದವು ಆರು ದಿನಗಳ ಸೃಷ್ಟಿಯನ್ನು ನಿರಾಕರಿಸುತ್ತದೆ ಮತ್ತು ಸೃಷ್ಟಿಯನ್ನು ಒಂದು ಪುರಾಣ ಎಂದು ಹೇಳುತ್ತದೆ. ಮತ್ತು ಸೃಷ್ಟಿಗೆ ಆರು ದಿನಗಳ ಬದಲಿಗೆ ಶತಕೋಟಿ ವರ್ಷಗಳು ಬೇಕಾಗುತ್ತದೆ ಎಂದು ವಾದಿಸುತ್ತದೆ, ಇದು ಭಾನುವಾರದ ಆರಾಧನೆಯನ್ನು ವಿರೋಧಿಸುವುದಕ್ಕೆ ಉಂಟಾಗುವ ಹಿಂಸೆಗಿಂತ ಹೆಚ್ಚಿನ ಅಪಾಯವನ್ನು ತಂದು ಒಡ್ಡುತ್ತದೆ.

**ಗುರುವಾರ**

## ನಕಲಿ ತ್ರೈಯೇಕತ್ವ

ತ್ರಿಯೇಕ ದೇವರ ಸ್ವಭಾವದ ಕುರಿತಾಗಿ ಇಡೀ ಸತ್ಯವೇದದಲ್ಲಿ ನಾವು ಕಾಣಬಹುದು. ಆದರೂ ಕೂಡ ಕೊನೆಯ ಕಾಲದ ವಂಚನೆ ಮತ್ತು ಹಿಂಸೆಯ ಹಿನ್ನಲೆಯಲ್ಲಿ ಪ್ರಕಟಣೆಯ ಪುಸ್ತಕದ ನಕಲಿ ತ್ರೈಯೇಕತ್ವದ ಕುರಿತಾಗಿ ತಿಳಿಸುತ್ತದೆ ಇದನ್ನು ಪ್ರಕಟಣೆ 13 ರಲ್ಲಿ ವಿವರಿಸಿರುವ ಘಟಸರ್ಪನು, ಸಮುದ್ರದಿಂದ ಬರುವ ಮೃಗ ಮತ್ತು ಭೂಮಿಯ ಮೇಲಿನ ಮೃಗ ಸೇರಿಕೊಂಡು ರೂಪಿಸುತ್ತವೆ.

ಪ್ರಕಟನೆ 12:17, 13:1,2. ನ್ನು ಓದಿರಿ, ಇಲ್ಲಿ ಯಾವುದನ್ನು ವರ್ಣಿಸಲಾಗಿದೆ?

ಘಟಸರ್ಪನು ಇಲ್ಲಿ ನಕಲಿ ತಂದೆಯಾಗಿ ಕಾಣುತ್ತಾನೆ, ಇದರಲ್ಲಿ ಅವನು ಸಂಪೂರ್ಣ ಹತೋಟಿಯನ್ನು ಹೊಂದಿದ್ದಾನೆ. ಅವನು ಕ್ರಿಸ್ತನ ನಕಲಿಯಾಗಿರುವ ಸಮುದ್ರದ ಮೃಗಕ್ಕೆ ಅಧಿಕಾರವನ್ನು ಮತ್ತು ಶಕ್ತಿಯನ್ನು ಮತ್ತು ಸಿಂಹಾಸನವನ್ನು ನೀಡುತ್ತಾನೆ. ಈ ಎರಡನೇಯ ಅಧಿಕಾರವನ್ನು ನಕಲಿ ಕ್ರಿಸ್ತನು ಎಂದು ಯಾಕೆ ನಾವು ನೋಡಬೇಕು?

ಪ್ರಕಟನೆ 13:2–5 ನ್ನು ಓದಿರಿ. ಸಮುದ್ರದಿಂದ ಬರುವ ಮೃಗಕ್ಕೆ ಇರುವ ಲಕ್ಷಣಗಳು ಯಾವುವು?

ಯೇಸುವು ತಂದೆಯಿಂದ ಅಧಿಕಾರವನ್ನು ಹೊಂದಿದ ಹಾಗೆ, ಘಟಸರ್ಪನಿಂದ ಅಧಿಕಾರವನ್ನು ಪಡೆದುಕೊಳ್ಳುವ ಜೊತೆಗೆ ಈ ಮೃಗಕ್ಕೆ ಯೇಸುವಿನ ಹಾಗೆ ಮರಣವನ್ನು ಎದುರಿಸಿ ಮತ್ತೆ ಪುನರುತ್ಥಾನವನ್ನು ಹೊಂದುತ್ತದೆ (ಪ್ರಕಟಣೆ 13:3 ನೋಡಿರಿ). ಮತ್ತೆ, ಈ ಮೃಗವು ನಲವತ್ತೆರಡು ತಿಂಗಳು ಅಥವಾ ಮೂರುವರೆ ವರ್ಷಗಳ ತನಕ ತನ್ನ ಅಧಿಕಾರವನ್ನು ಚಲಾಯಿಸುತ್ತದೆ ಎಂದು ವಿವರಿಸಲಾಗಿದೆ. ಇದು ಒಂದು ದಿನಕ್ಕೆ ಒಂದು ವರ್ಷದ ನಿಯಮದ ಆಧಾರದಲ್ಲಿ ಕ್ರಿಸ್ತನ ಮೂರುವರೆ ವರ್ಷದ ಸೇವೆಯನ್ನು ಸೂಚಿಸುತ್ತದೆ.

ಪ್ರಕಟಣೆ 13:11–17 ನ್ನು ಓದಿರಿ. ಇಲ್ಲಿ ಭೂಮಿಯ ಮೇಲಿನ ಮೃಗವನ್ನು ಹೇಗೆ ವರ್ಣಿಸಲಾಗಿದೆ?

ಪರಿಶುದ್ಧಾತ್ಮನು ಹೇಗೆ ತನ್ನ ವಿಚಾರಗಳನ್ನು ಅಲ್ಲದೆ ಯೇಸುವಿನ ವಿಚಾರಗಳನ್ನು ಹೇಗೆ ನಮ್ಮ ಮುಂದೆ ಇಡುತ್ತಾನೋ ಹಾಗೆಯೇ ಭೂಮಿಯ ಮೇಲಿನ ಮೃಗವು ಸಮುದ್ರದ ಮೇಲಿನ ಮೃಗದ ವಿಚಾರಗಳನ್ನು ಪ್ರೋತ್ಸಾಹಿಸುತ್ತದೆ (ಪ್ರಕಟಣೆ 16:13,14). ಮತ್ತೆ ಪರಿಶುದ್ಧಾತ್ಮನು ಹೇಗೆ ಪರಲೋಕದಿಂದ ಬೆಂಕಿಯನ್ನು ಕೆಳಗೆ ತಂದನೋ (ಅ.ಪ್ರೋ.ಕೃ. 23). ಅದೇ ರೀತಿಯಲ್ಲಿ ಈ ಮೃಗವೂ ಕೂಡ ಮಾಡುತ್ತದೆ (ಪ್ರಕಟಣೆ 13:13).

**"ಕೊನೆಯಲ್ಲಿ ಭೂಮಿಯ ಮೇಲಿನ ಮೃಗವು ನಕಲಿ ಪೆಂತಿಕೊಸ್ತಿನ ಅನುಭವವನ್ನು ತರುತ್ತದೆ! ಅದರ ಉದ್ದೇಶವೇನು?ನಕಲಿ ತ್ರೈಯೇಕತ್ವ ವು ನಿಜವಾದ ದೇವರಾಗಿದೆ ಎಂದು ಸಾಬಿತು ಪಡಿಸಲು ಇದನ್ನು ಮಾಡುತ್ತದೆ. ಜಾನ್ ಪಾಲಿನ್,ವಾಟ್ ಬೈಬಲ್ ಸೇಯ್ಸ್ ಅಬೌಟ್ ದಿ ಎಂಡ್ ಟೈಮ್. ಪುಟ 111.**

**ನಾವು ತಿಳಿದುಕೊಳ್ಳಬೇಕಾದ ಕೊನೆಯ ಕಾಲದ ಇನ್ನೂ ಕೆಲವು ವಂಚನೆಗಳು ಯಾವುವು, ಮತ್ತು ಈ ವಂಚನೆಗಳಿಂದ ದೂರವಿರುವಂತೆ ಬೇರೆಯವರನ್ನು ಹೇಗೆ ಎಚ್ಚರಿಸಬಹುದು?**

**ಶುಕ್ರವಾರ**

**ಮುಂದಿನ ಆಲೋಚನೆ :** ಕೊನೆಯ ಕಾಲದ ಘಟನೆಗಳ ಹಿನ್ನಲೆಯಲ್ಲಿ ವಿಕಸನವಾದದ ಪರಿಣಾಮಗಳ ಕುರಿತಾಗಿ ಆಲೋಚಿಸಿರಿ, ಅದರಲ್ಲೂ ವಿಶೇಷವಾಗಿ ಸಬ್ಬತ್ತಿನ ಪಾತ್ರದ ಕುರಿತಾಗಿ ಯೋಚಿಸಿರಿ. ಮಹಾ ಹೋರಾಟದಲ್ಲಿ ಒಳ್ಳೆಯ ಮತ್ತು ಕರುಣೆಯ ದೇವರು ಪಾಪ ಮತ್ತು ನೋವನ್ನು ಹೇಗೆ ಸಹಿಸುತ್ತಾನೆ ಎಂಬ ವಿಚಾರವನ್ನು ವಿಕಸನವಾದವನ್ನು ಕಂಡುಹಿಡಿದ ಚಾರ್ಲ್ಸ್ ಡಾರ್ವಿನ್ ಅರ್ಥ ಮಾಡಿಕೊಳ್ಳಲು ಬಹಳ ಕಷ್ಟಪಟ್ಟನು. ಇದರಲ್ಲಿ ಮಾಡಿದ ತಪ್ಪನ್ನು ಸರಿಪಡಿಸಲು ಅವನು ಉತ್ತರಕ್ಕಾಗಿ ಬೇರೆ ಕಡೆಗೆ ಹುಡುಕಲು ಆರಂಭಿಸಿದನು.

ಅದು ಕೇವಲ ಒಂದು ಕಾಕತಾಳಿಯವಾಗಿರಲಿಲ್ಲ, ಬದಲಿಗೆ 1800 ರ ಮದ್ಯದಲ್ಲಿ ಡಾರ್ವಿನ್ ತನ್ನ ವಿಕಸನ ವಾದದ ಮರು ಪರಿಶೀಲನೆಯನ್ನು ಮಾಡುತ್ತಿದ್ದನು, ಆಗ ದೇವರು ಒಂದು ಚಳುವಳಿಯನ್ನು ಆರಂಭಿಸಿದನು, ಸೇವೆಂತ್ ಡೇ ಅಡ್ವೆಂಟಿಸ್ಟ್ ಸಭೆ, ಈ ಸಭೆಯು ಡಾರ್ವಿನ್ ನ ವಿಕಸನವಾದ ಎಲ್ಲವನ್ನೂ ಚರ್ಚೆಯನ್ನು ಸುಳ್ಳು ಎಂದು ತೋರಿಸಿತು. ತನ್ನ ಹೆಸರಿನಲ್ಲಿಯೇ ಸೃಷ್ಟಿಯ ಮೂಲ ಸಿದ್ದಾಂತವನ್ನು ಇಟ್ಟುಕೊಂಡಿರುವ ಈ ಸಭೆಯು ಬೆಳೆಯುತ್ತಾ ಹೋದಂತೆ ಡಾರ್ವಿನ್ ನ ವಿಕಸನ ವಾದವೂ ಕೂಡ ಬೆಳೆಯುತ್ತಾ ಹೋಯಿತು.

ಡಾರ್ವಿನ್ ಎಲೆನ್ ಜಿ ವೈಟ್ ರವರು ಬರೆದಿರುವ ಈ ಕೆಲವು ಸಾಲುಗಳನ್ನು ಓದಿ ಅರ್ಥ ಮಾಡಿಕೊಂಡಿದ್ದರೆ ಪ್ರಪಂಚದ ಅತೀ ದೊಡ್ಡ ತಪ್ಪುಗಳಲ್ಲಿ ಒಂದಾದ ವಿಕಸನ ವಾದ ಮತ್ತು ಸ್ವಾಭಾವಿಕ ಪೀಳಿಗೆಯ ಮಾನವ ಆಲೋಚನೆಯನ್ನು ತಪ್ಪಿಸಬಹುದಾಗಿತ್ತು. ಲೋಕವು ಪಾಪದ ಬೆಳಕಿನಲ್ಲಿ ಇದ್ದರೂ ಕೂಡ ಪ್ರಕೃತಿಯು ಮನುಷ್ಯನ ಪಾಠದ ಪುಸ್ತಕವಾಗಿದೆ. ಪ್ರಕೃತಿಯು ಈಗ ಒಳ್ಳೆಯದನ್ನು ಮಾತ್ರ ತೋರಿಸುತ್ತಿಲ್ಲ; ದುಷ್ಟತನ ಎಲ್ಲಾ ಕಡೆಗಳಲ್ಲೂ ಇದೆ, ಇದರಿಂದ ಭೂಮಿ ಮತ್ತು ಸಮುದ್ರ ಹಾಗೂ ಗಾಳಿ ಎಲ್ಲವೂ ಕೂಡ ಹಾಳಾಗಿದೆ. ಎಲ್ಲಿ ಮೊದಲು ದೇವರ ಗುಣಲಕ್ಷಣಗಳು ದೇವರ ಒಳ್ಳೆಯ ಜ್ಞಾನವು ಮಾತ್ರ ಬರೆಯಲ್ಪಟ್ಟಿತ್ತೋ ಅಲ್ಲಿ ಈಗ ಸೈತಾನನ ಸ್ವಭಾವ ದುಷ್ಟತನದ ಜ್ಞಾನವು ಬರೆಯಲ್ಪಟ್ಟಿದೆ. ಪ್ರಕೃತಿಯಿಂದ ಮನುಷ್ಯನು ಒಳ್ಳೆಯದರ ಮತ್ತು ಕೆಟ್ಟದರ ಅರಿವನ್ನು ಪಡೆಯುತ್ತಿದ್ದ ಮನುಷ್ಯನು ಈಗ ಪಾಪದ ಫಲವಾಗಿ ಎಚ್ಚರಿಕೆಗಳನ್ನು ಪಡೆಯುತ್ತಿದ್ದಾನೆ.ಎಜುಕೇಶನ್ ಪುಟ 26.

ಡಾರ್ವಿನ್ ನು ತನ್ನ ವಿಕಸನವಾದದ ಯೋಜನೆಯನ್ನು ರೂಪುಗೊಳಿಸುವ ಅದು ಪ್ರಕೃತಿಯನ್ನು ಮತ್ತು ದೇವರ ಸ್ವಭಾವವನ್ನು ಹಾಗೂ ಬಿದ್ದು ಹೋಗಿರುವ ಲೋಕವನ್ನು ತಪ್ಪಾಗಿ ಅರ್ಥಮಾಡಿಕೊಳ್ಳುವುದರ ಮೇಲೆ ಅಧಾರವಾಗಿರುವ ಹಾಗೆ, ವಿಶೇಷವಾಗಿ ಕೊನೆಯ ಕಾಲದಲ್ಲಿ ಅನೇಕರು ಸೈತಾನನ ಬಲೆಗೆ ಬೀಳಲು ಇದು ಬಹಳ ಸಹಾಯಕಾರಿಯಾಗುತ್ತದೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಸೈತಾನನ ನಿಜಸ್ವರೂಪವನ್ನು ಅನೇಕರು ಯಾಕೆ ನಂಬುವುದಿಲ್ಲ? ಸತ್ಯವೇದದ ಸ್ಪಷ್ಟವಾದ ಅಧ್ಯಯನವನ್ನು ನಿರಾಕರಿಸುವುದರ ಪರಿಣಾಮವನ್ನು ಇದು ಹೇಗೆ ಸ್ಪಷ್ಟ ಪಡಿಸುತ್ತದೆ?
2. ಮರಣದ ಅನುಭವವನ್ನು ಹೊಂದಿರುವ ವ್ಯಕ್ತಿಯ ಜೊತೆಯಲ್ಲಿ ಅದರಲ್ಲೂ ಮರಣದ ನಂತರ ಜೀವವಿದೆ ಎಂದು ನಂಬುವ ವ್ಯಕ್ತಿಗೆ ನೀವು ಯಾವ ರೀತಿಯಲ್ಲಿ ಉತ್ತರ ನೀಡುವಿರಿ?
3. ವಿಕಸನ ವಾದದಲ್ಲಿ ನಂಬಿಕೆಯಿಡುವವರು ಕೊನೆಯ ಕಾಲದ ವಂಚನೆಗಳಿಗೆ ಬೇಗ ಬಿದ್ದು ಹೋಗುವವರು ಎಂಬುದಕ್ಕೆ ನೀವು ಯಾವ ಕಾರಣಗಳನ್ನು ನೀಡುವಿರಿ?